ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03.09.2015

# ಸುತ್ತೋಲೆ

ವಿಷಯ: ಅಂಗವಿಕಲರ ಕಲ್ಯಾಣಕ್ಕಾಗಿ ಗ್ರಾಮ ಪಂಚಾಯಿತಿ ಸ್ವಂತ ಅನುದಾನದಲ್ಲಿ ಶೇ.3 ಕ್ಕೆ ಕಡಿಮೆ ಇಲ್ಲದಂತೆ ಅನುದಾನವನ್ನು ವಿನಿಯೋಗಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 206 ಜಿಪಸ 2010, ದಿನಾಂಕ 08.09.2011

**********

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ-1995 ರ ಕಲಂ 46 ರ ಪ್ರಕಾರ ಎಲ್ಲಾ ಸ್ಥಳೀಯ ಸಂಸ್ಥೆಗಳು ಅಂಗವಿಕಲರ ಕಲ್ಯಾಣಕ್ಕಾಗಿ ಶೇ.3 ರಷ್ಟು ಅನುದಾನವನ್ನು ಕಡ್ಡಾಯವಾಗಿ ಮೀಸಲಿರಿಸಿ, ಈ ಅನುದಾನವನ್ನು ಅಂಗವಿಕಲರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ವೈದ್ಯಕೀಯ ಹಾಗೂ ಪುನರ್ವಸತಿ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕಾಗಿರುತ್ತದೆ. ಅದರಂತೆ ಗ್ರಾಮ ಪಂಚಾಯಿತಿಗಳ ಸ್ವಂತ ಅನುದಾನದಲ್ಲಿ ಶೇ.3 ರಷ್ಟು ಅನುದಾನವನ್ನು ಸದರಿ ಉದ್ದೇಶಕ್ಕಾಗಿ ವಿನಿಯೋಗಿಸಲು ಕ್ರಮವಹಿಸಬೇಕಾಗಿರುತ್ತದೆ.

ಆದರೆ, ಸೂಕ್ತ ಮಾರ್ಗಸೂಚಿಗಳ ಕೊರತೆಯಿಂದ ಗ್ರಾಮ ಪಂಚಾಯಿತಿಗಳಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಶೇ.3 ರಷ್ಟು ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸುವಲ್ಲಿ ವಿಫಲರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಗ್ರಾಮ ಪಂಚಾಯಿತಿಗಳ ಸ್ವಂತ ಅನುದಾನದಲ್ಲಿ ಶೇ.3 ರಷ್ಟು ಅನುದಾನವನ್ನು ವಿಕಲಚೇತನರಿಗೆ ವಿನಿಯೋಗಿಸುವ ಸಂಬಂಧ ಈಗಾಗಲೇ ಹೊರಡಿಸಲಾದ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಸದರಿ ಕಾರ್ಯಕ್ರಮಗಳ ಜೊತೆಗೆ ಗ್ರಾಮ ಪಂಚಾಯಿತಿಗಳ ಸ್ವಂತ ಅನುದಾನದಲ್ಲಿ ಶೇ.3 ರಷ್ಟು ಅನುದಾನವನ್ನು ವಿಕಲಚೇತನರಿಗೆ ವಿನಿಯೋಗಿಸುವ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

**ವಿಕಲಚೇತನರ ಕಲ್ಯಾಣಕ್ಕಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು:**

1. ಎಸ್.ಎಸ್.ಎಲ್.ಸಿ., ಅಭ್ಯಸಿಸುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.500, ಪಿ.ಯು.ಸಿ. ಅಭ್ಯಸಿಸುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.750, ಪದವಿ ಅಭ್ಯಸಿಸುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1000 ಹಾಗೂ ಉನ್ನತ ಪದವಿ ಮತ್ತು ವೃತ್ತಿ ಶಿಕ್ಷಣ ಅಭ್ಯಸಿಸುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1500 ಸಹಾಯಧನ ನೀಡಬಹುದು.
2. ಪಬ್ಲಿಕ್ ಪರೀಕ್ಷೆಗಳಲ್ಲಿ ಶೇ.60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಬಹುಮಾನಗಳನ್ನು ನೀಡಬಹುದು.
3. ವಿಕಲಚೇತನರು ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಂಸ್ಕೃತಿಕ ಚಟುವಟಿಕೆ, ಕ್ರೀಡೆ ಹಾಗೂ ಇನ್ನಿತರ ವ್ಯಾಸಂಗೇತರ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ರೂ.2000 ಮತ್ತು ರೂ.5000 ವರೆಗೆ ಕ್ರಮವಾಗಿ ಸಹಾಯಧನ ನೀಡಬಹುದು.
4. ಬಿ.ಪಿ.ಎಲ್. ವಿಕಲಚೇತನ ವ್ಯಕ್ತಿಗಳ ಚಾಲನೆಗೆ ಹಾಗೂ ಅವಶ್ಯಕತೆಗಳನ್ನು ಪೂರೈಸಲು ಅಗತ್ಯವಾದಂತಹ ಸಲಕರಣೆಗಳನ್ನು (ವಿಶೇಷವಾಗಿ ಅಂಗವಿಕರಿಗೆ ತಯಾರಿಸಿದ ಪಾದರಕ್ಷೆಗಳು, ಮೂಳೆ ಸಂಬಂಧಿತ ಸಲಕರಣೆಗಳು, ಕೃತಕ ಕೈ, ಕೃತಕ ಕಾಲು, ನಡೆಯಲು ಅನುಕೂಲವಾಗುವಂತೆ ವಾಕರ್‌ಗಳು, ಅಂಧರಿಗಾಗಿ ಗಂಟೆ ಹೊಂದಿರುವ ಬಿಳಿ ಬೆತ್ತಗಳು, ಬ್ರೈಲ್ ಬೆರಳಚ್ಚಿಗೆ ಸಹಾಯವಾಗುವ ಸಾಧನಗಳು, ಉನ್ನತ ವಿಜ್ಞಾನ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಮಾತನಾಡುವ ಕ್ಯಾಲ್ಕುಲೇಟರ್‌ಗಳು,

ಕಿವುಡರಿಗಾಗಿ Hearing aids, ಇತ್ಯಾದಿ) ಖರೀದಿಸಲು ಸಲಕರಣೆಯ ದರಕ್ಕನುಗುಣವಾಗಿ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.

5. ವಿಕಲಚೇತನರ ಸಾಧನ ಸಲಕರಣೆಗಳ ದುರಸ್ತಿಗಾಗಿ ಸಂಬಂಧಪಟ್ಟವರಿಂದ ದೃಢೀಕರಣ ಪತ್ರ ಪಡೆದು ಗರಿಷ್ಠ ರೂ.1000 ವರೆಗೆ ಸಹಾಯಧನ ನೀಡಬಹುದು.
6. ಬಿ.ಪಿ.ಎಲ್. ವಿಕಲಚೇತನರಿಗೆ ವಿಕಲತೆಯನ್ನು ನಿವಾರಿಸುವ ಶಸ್ತ್ರ ಚಿಕಿತ್ಸೆಯ ಖರ್ಚು ರೂ.35000 ಮೀರಿದ್ದಲ್ಲಿ, ಗರಿಷ್ಠ ರೂ.10000 ವರೆಗೆ ಶಸ್ತ್ರ ಚಿಕಿತ್ಸಾ ವೆಚ್ಚ ನೀಡಬಹುದು. (ಚಿಕಿತ್ಸೆಗಾಗಿ ಭರಿಸಿದ ವೆಚ್ಚಗಳ ರಸೀದಿಗಳು ಒದಗಿಸಬೇಕು ಹಾಗೂ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ವಿಶೇಷ ಪ್ರಕರಣವಾಗಿದ್ದಲ್ಲಿ ಇತರೆ ಸುಸಜ್ಜಿತ ಆಸ್ಪತ್ರೆಗಳಲ್ಲಿ ಪಡೆದಿರಬೇಕು.)
7. ಅಂಗವಿಕಲರಿಗೆ ಅನುಕೂಲವಾಗಲು ಗ್ರಾಮ ಪಂಚಾಯಿತಿ ಕಛೇರಿ ಹಾಗೂ ಸರ್ಕಾರಿ ಕಛೇರಿ ಕಟ್ಟಡಗಳಿಗೆ ಇಳಿಜಾರು ವ್ಯವಸ್ಥೆ (ರ್‍ಯಾಂಪ್) ವ್ಯವಸ್ಥೆ ಕಲ್ಪಿಸಬಹುದು.
8. ವಿಕಲಚೇತನ ವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಸ್ ಪಾಸ್ ಪಡೆಯಲು ಪಾವತಿಸುತ್ತಿರುವ ವಾಸ್ತವಿಕ ಮೊತ್ತವನ್ನು ಸಹಾಧನವನ್ನಾಗಿ ನೀಡಬಹುದು.
9. ಬಿ.ಪಿ.ಎಲ್. ವಿಕಲಚೇತನರಿಗೆ ಗ್ರಾಮ ಪಂಚಾಯಿತಿಯಿಂದ ನೀರಿನ ಸಂಪರ್ಕ ನೀಡಲು ಪಡೆಯುವ ಠೇವಣಿಯಿಂದ ವಿನಾಯಿತಿ ನೀಡುವುದು.
10. ಬಿ.ಪಿ.ಎಲ್. ವಿಕಲಚೇತನ ವ್ಯಕ್ತಿಗಳ ಆರ್ಥಿಕವಾಗಿ ಸಬಲೀಕರಣಕ್ಕಾಗಿ ಕೌಶಲ್ಯಾಭಿವೃದ್ಧಿ/ಉದ್ಯಮಶೀಲತಾ ತರಬೇತಿಗಳನ್ನು ನೀಡುಲು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಮಾನ್ಯತೆ ಪಡೆದ ಅರ್ಹ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.
11. ಬಿ.ಪಿ.ಎಲ್ ವಿಕಲಚೇತನ ವ್ಯಕ್ತಿಗಳು ಜೀವನ ನಿರ್ವಹಣೆಗಾಗಿ ಕೈಗೊಳ್ಳಲು ಬಯಸುವ ಆದಾಯ ಉತ್ಪನ್ನಕರ ಚಟುವಟಿಕೆಗಳಿಗೆ ಗರಿಷ್ಠ ರೂ.5000/- ಗಳವರೆಗೆ ಸಹಾಯಧನವನ್ನು ನೀಡಬಹುದು. ಒಂದು ವೇಳೆ ಫಲಾನುಭವಿಯು ಬ್ಯಾಂಕ್ ಸಾಲವನ್ನು ಪಡೆದಲ್ಲಿ ಬ್ಯಾಂಕ್ ಸಾಲ ಮಂಜೂರು ಮಾಡಿದ ನಂತರ ಹೊಂದಾಣಿಕೆ ಮೊತ್ತದ ರೂಪದಲ್ಲಿ ಬ್ಯಾಂಕುಗಳಿಗೆ ಸಹಾಯಧನ ಪಾವತಿಸಬಹುದು.
12. ವಿಕಲಚೇತನರಿಗೆ ಅಂಗವಿಕಲತೆಯ ಬಗ್ಗೆ ಅರಿವು ಮೂಡಿಸಲು, ಪತ್ತೆ ಹಚ್ಚಲು, ತಡೆಗಟ್ಟಲು, ಅಂಧ ವ್ಯಕ್ತಿಗಳಿಗೆ ಚಲನವಲನ ತರಬೇತಿ ಹಾಗೂ ಬುದ್ಧಿಮಾಂದ್ಯರಿಗೆ ದೈನಂದಿನ ಚಟುವಟಿಕೆಗಳನ್ನು ಕೈಗೊಳ್ಳಲು, ವಿಕಲಚೇತನರಿಗೆ ಆರ್ಥಿಕ ಸಬಲೀಕರಣಕ್ಕಾಗಿ ಸ್ವಂತ ಉದ್ದಿಮೆ ಮಾಡಲು ತರಬೇತಿಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಸುವ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಮಾನ್ಯತೆ ಪಡೆದ ಅರ್ಹ ಸಂಸ್ಥೆಗಳಿಗೆ ಗರಿಷ್ಠ ರೂ.5000 ವರೆಗೆ ಸಹಾಯ ಧನ ನೀಡಬಹುದು.
13. ವಿಕಲಚೇತನರೇ ಮುಖ್ಯಸ್ಥರಾಗಿರುವ ಬಿ.ಪಿ.ಎಲ್ ಕುಟುಂಬಗಳಿಗೆ, ಹೊಸದಾಗಿ ಅಡುಗೆ ಅನಿಲ ಸಂಪರ್ಕ ಪಡೆಯಲು ತಗಲುವ ವಾಸ್ತವಿಕ ವೆಚ್ಚವನ್ನು ಸಹಾಯಧನವಾಗಿ ನೀಡಬಹುದು.
14. ವಿಕಲಚೇತನರೇ ಮುಖ್ಯಸ್ಥರಾಗಿರುವ ಬಿಪಿಎಲ್ ಕುಟುಂಬಗಳಿಗೆ ಸೋಲಾರ್ ಲಾಟೀನು ದೀಪಗಳನ್ನು ವಿತರಿಸಬಹುದು.
15. ವಿಕಲಚೇತನರೇ ಮುಖ್ಯಸ್ಥರಾಗಿರುವ ಬಿಪಿಎಲ್ ಕುಟುಂಬಗಳ ಗುಡಿಸಲು ಹಾಗೂ ಮನೆಗಳು ಪ್ರಕೃತಿ ಹಾನಿಯಿಂದ ಹಾಳಾಗಿ ವಾಸಿಸಲು ತೀರಾ ಯೋಗ್ಯವಿರದಿದ್ದಲ್ಲಿ ಅಗತ್ಯಕ್ಕನುಗುಣವಾಗಿ ಗರಿಷ್ಠ ರೂ.5000 ದವರೆಗೆ ಸಹಾಯ ನೀಡಬಹುದು.
16. ಅಂಗವಿಕಲ ಮಹಿಳೆಯನ್ನು ಮದುವೆಯಾದಲ್ಲಿ ಉತ್ತೇಜನ ನೀಡಲು ರೂ.5000 ದವರೆಗೆ ಪ್ರೋತ್ಸಾಹಧನ ನೀಡಬಹುದು.
17. ಗ್ರಾಮ ಮಟ್ಟದಲ್ಲಿ ಅಂಗವಿಕಲರ ಪುನರ್ವಸತಿ ಸಮಿತಿಗಳನ್ನು ಬಲವರ್ಧನೆಗೊಳಿಸುವ ಸಲುವಾಗಿ ನಿರ್ವಹಣಾ ವೆಚ್ಚವಾಗಿ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಪ್ರಯಾಣ ಭತ್ಯೆ, ಸ್ಟೇಷನರಿ ವೆಚ್ಚ,

ಪೀಠೋಪಕರಣಗಳು, ವಿಕಲಚೇತನರ ದಿನಾಚರಣೆ ಇತ್ಯಾದಿ) ವಾರ್ಷಿಕವಾಗಿ ರೂ.5000/- ಗಳ ಗರಿಷ್ಠ ಮಿತಿಯವರೆಗೆ ನೀಡಬಹುದು.

**ಅನುದಾನ ನಿಗಧಿಪಡಿಸುವಲ್ಲಿ ಅನುಸರಿಸಬೇಕಾದ ಕ್ರಮಗಳು:**

- ಗ್ರಾಮ ಪಂಚಾಯಿತಿ ಸ್ವಂತ ಆದಾಯದಲ್ಲಿ ಉಪಕರಗಳನ್ನು ಹೊರತುಪಡಿಸಿ ಶೇಕಡ ಮೂರಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗವಿಕಲರ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ಸರ್ಕಾರಿ ಹಾಗೂ ಇತರೆ ಇಲಾಖೆಗಳ ಪರವಾಗಿ ಸಂಗ್ರಹಿಸಿ, ಸರ್ಕಾರಕ್ಕೆ ಮರುಪಾವತಿಸಬೇಕಾದ ತೆರಿಗೆಗಳನ್ನು ಹೊರತುಪಡಿಸಿ ಶೇಕಡ ಮೂರಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗವಿಕಲರ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನವನ್ನು ಆಯಾ ಆರ್ಥಿಕ ಸಾಲಿನಲ್ಲೇ ಕಡ್ಡಾಯವಾಗಿ ಖರ್ಚು ಭರಿಸುವುದು.
- ಈ ಸುತ್ತೋಲೆಯಲ್ಲಿ ಹೊರಡಿಸಿದ ಮಾರ್ಗಸೂಚಿಗಳನ್ನು ಗ್ರಾಮಪಂಚಾಯತಿಯ ಸಾಮಾನ್ಯ ಸಭೆಯ ನಿರ್ಣಯದಂತೆ ಅನುಷ್ಠಾನಗೊಳಿಸುವುದು.

ಮೇಲೆ ನೀಡಿರುವ ಮಾರ್ಗಸೂಚಿಗಳಲ್ಲದೆ, ಇತರೆ ಕಾರಣದಿಂದ ಇನ್ಯಾವುದೇ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು ಮುಖ್ಯವೆನಿಸಿದಲ್ಲಿ, ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಅಗತ್ಯ ಕ್ರಮವಹಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆಯನ್ನು ನೀಡಲು ಕ್ರಮವಹಿಸಲು ತಿಳಿಸಿದೆ. ಮೇಲೆ ತಿಳಿಸಿರುವ ಕಾರ್ಯಕ್ರಮಗಳಲ್ಲದೆ ಇನ್ನು ಕೆಲವು ಕಾರ್ಯಕ್ರಮಗಳು ಅಗತ್ಯವೆನಿಸಿ ಸೇರಿಸಬೇಕಾಗಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದಲ್ಲಿ ಅವುಗಳನ್ನು ಸಹ ಪರಿಗಣಿಸಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದು.

3/5/18

(ಕೆ.ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

1. ಎಲ್ಲಾ ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ. (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ಗೆ ಅಳವಡಿಸಲು.
5. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
6. ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.